## ನಿಮ್ಮೊಡನೆ

# ‘ಹಿರಿಯ ಜೀವ’ಗಳ ಕೊರಗು-ನಿಟ್ಟುಸಿರು ನಾಳೆ ತಿರುಗುಬಾಣವಾದೀತು ಹುಷಾರು

**ಮನುಷ್ಯನಿಗೆ ಮುಪ್ಪು ಬರುವುದು ಪ್ರಕೃತಿ ಸಹಜ ವಿದ್ಯಮಾನ. ಮುಪ್ಪನ್ನು ಸಲ್ಲದ ಪೂರ್ವಗ್ರಹ, ನಕಾರಾತ್ಮಕ ಮೌಲ್ಯ ಹಾಗೂ ಧೋರಣೆಗಳ ಜತೆ ಸಮೀಕರಿಸಿ, ಮುಪ್ಪು ಆವರಿಸಿದವರನ್ನು ಅಲಕ್ಷಿಸುವುದು ಸರ್ವಥಾ ಸರಿಯಲ್ಲ. ಹಿರಿಯರನ್ನು ಅವಗಣನೆ ಮಾಡುವ ಕಿರಿಯರು ಮುಂದೊಂದು ದಿನ ತಮಗೂ ಮುಪ್ಪು ಆವರಿಸಲಿದೆ ಎಂಬುದನ್ನು ಮರೆಯಬಾರದು.**

ಕುಟುಂಬವೆಂಬುದು ಸಮಾಜದ ಪ್ರಾಥಮಿಕ ಸಂಸ್ಥೆಗಳಲ್ಲೊಂದು. ಸಂಬಂಧಗಳ ಕಟ್ಟು ಎನ್ನುವುದು ಅದಕ್ಕಿರುವ ಸರಳ ವ್ಯಾಖ್ಯಾನ. ಮಾನವ ಜನಾಂಗವು ಗಟ್ಟಿಯಾಗಿ ಬೇರೂರಿದ್ದು ಕುಟುಂಬ ವ್ಯವಸ್ಥೆಯ ಮೂಲಕವೇ. ಇಂತಹ ವ್ಯವಸ್ಥೆಗೆ ಕಾಲದ ಆಘಾತಗಳು, ಸವಾಲುಗಳು ಹಾಗೂ ಒತ್ತಡಗಳು ಎದುರಾದರೂ ಲಾಗಾಯ್ತಿನಿಂದಲೂ ಸಮಾಜದ ಅವಿಭಾಜ್ಯ ಅಂಗವಾಗಿಯೇ ಅದು ಉಳಿದುಕೊಂಡು ಬಂದಿದೆ. ಆದರೆ, ಕೌಟುಂಬಿಕ ಸಂರಚನೆಯಲ್ಲಿ ನಿರಂತರವಾಗಿ ಆಗುತ್ತಿರುವ ಬದಲಾವಣೆಗಳು, ಸಂಭವಿಸುತ್ತಿರುವ ವಿಘಟನೆಗಳು ಸಮಾಜದಲ್ಲಿ ದೊಡ್ಡ ಅನಾಹುತವನ್ನೇ ಉಂಟುಮಾಡಿರುವುದು ಸುಳ್ಳಲ್ಲ. ವೃದ್ಧಾಪ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಇತ್ತೀಚೆಗಷ್ಟೇ ಬಿಡುಗಡೆ ಮಾಡಿರುವ ಸಮೀಕ್ಷಾ ವರದಿ ಆ ಅನಾಹುತದ ಸ್ವರೂಪ ಎಂತಹದ್ದು ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಡುತ್ತದೆ.

ಕುಟುಂಬದ ವಿಘಟನೆಯಿಂದ ಹಿರಿಯ ನಾಗರಿಕರ ಕಡೆಗಿನ ನಿಷ್ಕಾಳಜಿ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬಿಹಾರ ಮತ್ತು ಕರ್ನಾಟಕದಲ್ಲಿ ಅದರ ಪ್ರಮಾಣ ದೇಶದ ಉಳಿದ ಕಡೆಗಳಿಗಿಂತ ಅಧಿಕವಾಗಿದೆ ಎನ್ನುತ್ತದೆ ವರದಿ. ಸುಸಂಸ್ಕೃತ ನಾಡು ಎಂದು ಬೀಗುತ್ತಿದ್ದ ನಮ್ಮ ರಾಜ್ಯದಲ್ಲಿಯೇ ಶೇ 10ರಷ್ಟು ಹಿರಿಯ ನಾಗರಿಕರು ಕುಟುಂಬದಿಂದ ಸಂಪೂರ್ಣವಾಗಿ ಅವಗಣನೆಗೆ ಒಳಗಾಗಿರುವುದು ಸಮೀಕ್ಷೆಯಿಂದ ಬೆಳಕಿಗೆ ಬಂದಿದೆ.

ಶೇ 75ರಷ್ಟು ಹಿರಿಯ ನಾಗರಿಕರು ವೃದ್ಧಾಪ್ಯದ ಗಂಭೀರ ಕಾಯಿಲೆಗಳಿಂದ ಬಳಲುತ್ತಿದ್ದರೆ, ಶೇ 40ರಷ್ಟು ಹಿರಿಯರು ಒಂದಿಲ್ಲೊಂದು ಅಂಗವೈಕಲ್ಯದ ಸಮಸ್ಯೆಗೆ ತುತ್ತಾಗಿದ್ದಾರೆ. ಮಾನಸಿಕ ಸಮಸ್ಯೆಗಳಿಂದ ಬಳಲುವವರ ಪ್ರಮಾಣ ಶೇ 20ರಷ್ಟಿದೆ. ಶೇ 40ರಷ್ಟು ಹಿರಿಯರಿಗೆ ಶ್ವಾಸಕೋಶ ಸಂಬಂಧಿ ಕಾಯಿಲೆಗಳಿದ್ದರೆ, ಪ್ರತೀ ಐವರಲ್ಲಿ ಒಬ್ಬರಿಗೆ ತಮ್ಮ ದಿನನಿತ್ಯದ ಅಗತ್ಯಗಳನ್ನು ಪೂರೈಸಲು ಇನ್ನೊಬ್ಬರ ಸಹಾಯಬೇಕು. ಪ್ರತೀ ಮೂವರಲ್ಲಿ ಒಬ್ಬರಿಗೆ ಕಿವಿ ಕೇಳದು ಅಥವಾ ಕಣ್ಣು ಕಾಣದು. ಬಾಳ ಮುಸ್ಸಂಜೆಯಲ್ಲಿ, ಇಂತಹ ಆರೋಗ್ಯ ಸಮಸ್ಯೆಗಳನ್ನೆಲ್ಲ ಬೆನ್ನಿಗೆ ಕಟ್ಟಿಕೊಂಡು ಬದುಕು ಸಾಗಿಸುವವರಿಗೆ ಬೇಕಾಗಿರುವುದು ಮಾನವೀಯ ಸ್ಪರ್ಶದ ಆರೈಕೆ ಹಾಗೂ ನೋವು ಮರೆಸುವಂತಹ ಸಾಂತ್ವನ. ಆದರೆ, ಅವರ ಪಾಲಿಗದೇ ಮರೀಚಿಕೆ.

ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳಲ್ಲಿ ಮುಪ್ಪಿನ ವ್ಯಕ್ತಿಗಳು ಅದರ ಅವಿಭಾಜ್ಯ ಅಂಗವಾಗಿದ್ದರು. ನಗರೀಕರಣ, ಔದ್ಯಮೀಕರಣ ಹಾಗೂ ಆಧುನೀಕರಣದಿಂದಾಗಿ ಅವಿಭಕ್ತ ಕುಟುಂಬಗಳು ಛಿದ್ರಗೊಳ್ಳುತ್ತಿದ್ದು, ಅದರ ಪ್ರಭಾವ ಹಿರಿಯರ ನಿಷ್ಕಾಳಜಿಯಲ್ಲಿ ಢಾಳಾಗಿ ಎದ್ದು ಕಾಣುತ್ತಿದೆ. ಹೆತ್ತವರ ಸಮಾಜೋ–ಆರ್ಥಿಕ, ವೈದ್ಯಕೀಯ ಹಾಗೂ ಮನರಂಜನೆಯ ಅವಶ್ಯಕತೆಗಳತ್ತ ಲಕ್ಷ್ಯಹರಿಸದ ಮಕ್ಕಳು, ತಾವು ಹೆತ್ತ ಮಕ್ಕಳ ಕಡೆಗೇ ಗಮನವನ್ನೆಲ್ಲ ಕೇಂದ್ರೀಕರಿಸಿರುವುದು ಇತ್ತೀಚಿನ ದಶಕಗಳಲ್ಲಿ ಎದ್ದು ಕಾಣುತ್ತಿರುವ ವಿಲಕ್ಷಣ ವಾಸ್ತವ.

ದಶಕಗಳ ಹಿಂದೆ ಗ್ರಾಮೀಣ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಅವಿಭಕ್ತ ಕುಟುಂಬಗಳೀಗ ‘ಅಳಿವಿನಂಚಿನ ಪ್ರಭೇದ’ಗಳಂತೆ ಅಲ್ಲೊಂದು ಇಲ್ಲೊಂದು ಉಳಿದುಕೊಂಡಿವೆ. ಗ್ರಾಮಾಂತರ ಭಾಗದ ಯುವಶಕ್ತಿ ಬದುಕು ಅರಸಿ ನಗರದ ಹಾದಿಯನ್ನು ಹಿಡಿದ ಬಳಿಕ, ಬಹುತೇಕ ಹಳ್ಳಿಗಳು ವೃದ್ಧಾಶ್ರಮಗಳಾಗಿವೆ. ಅಲ್ಲಿ ಆರೈಕೆ ಮಾಡುವವರಿಲ್ಲದೆ, ವೈದ್ಯಕೀಯ ಸೌಲಭ್ಯಗಳೂ ಇಲ್ಲದೆ ಹಿರಿಯರು ಯಾತನಾಮಯ ಬದುಕನ್ನು ಸಾಗಿಸುವಂತಾಗಿದೆ.

‘Sparrow, father and son’ ಎಂಬ ಐದು ನಿಮಿಷದ ಕಿರುಚಿತ್ರವನ್ನು ನಾವೊಮ್ಮೆ ನೋಡಬೇಕು. ಕಲ್ಲುಬೆಂಚಿನ ಮೇಲೆ ತಂದೆ, ಮಗ ಕುಳಿತಿರುತ್ತಾರೆ. ಗುಬ್ಬಿಯೊಂದು ಹಾರಿಬರುವುದನ್ನು ತೋರಿಸಿ ತಂದೆ, ಮಗನನ್ನು ಕೇಳುತ್ತಾನೆ: ‘ಅದು ಏನು?’. ಮಗ ‘ಗುಬ್ಬಿ’ ಎಂದು ಉತ್ತರಿಸುತ್ತಾನೆ. ಮತ್ತದೇ ಪ್ರಶ್ನೆ, ಅದೇ ಉತ್ತರ. ಮೂರನೇ ಬಾರಿ ಅದೇ ಪ್ರಶ್ನೆ ಬಂದಾಗ ಮಗನಿಗೆ ರೇಗಿಹೋಗುತ್ತದೆ. ಆಗ ತಂದೆ ಡೈರಿಯೊಂದನ್ನು ತಂದು ಮಗನ ಕೈಗೆ ಕೊಡುತ್ತಾನೆ. ‘ನನ್ನ ಮಗನಿಗೆ ಇಂದಿಗೆ ಮೂರು ವರ್ಷ ತುಂಬುತ್ತಿದೆ. ಇಂದು ಹಾರುವ ಗುಬ್ಬಿಯನ್ನು ತೋರಿಸಿ ಅದೇನು ಎಂದು 21 ಸಲ ಆತ ಕೇಳಿದ. ಪ್ರತೀ ಸಲವೂ ‘ಗುಬ್ಬಿ’ ಎಂಬ ಉತ್ತರಕೊಟ್ಟು, ಆತನನ್ನು ತಬ್ಬಿಕೊಳ್ಳುತ್ತಿದ್ದೆ’ ಎಂದು ಅದರಲ್ಲಿ ಬರೆದಿರುತ್ತದೆ. ಮಗುವಾಗಿದ್ದಾಗ ಅಂತಹ ನಿಷ್ಕಲ್ಮಶವಾದ ಪ್ರೀತಿಯನ್ನು ಕೊಟ್ಟವರಿಗೆ ಅಂತಹದ್ದೇ ಮಮತೆಯನ್ನು ತೋರಿಸಿ ಋಣ ತೀರಿಸುವ ಹೊಣೆಯನ್ನು ನಾವು ಮರೆಯಬಾರದು.

ಸಿನಿಮಾವೊಂದರ ತುಣುಕೊಂದು ಸಹ ಇಲ್ಲಿ ನೆನಪಾತ್ತಿದೆ. ಪುಟ್ಟ ಮಗುವೊಂದು ಮುರಿದ ಮಡಿಕೆಯ ತುಣುಕುಗಳನ್ನು ಸಂಗ್ರಹಿಸಿ ಇಡುತ್ತಿರುತ್ತದೆ. ‘ಆ ತುಣುಕುಗಳನ್ನು ಸಂಗ್ರಹಿಸುತ್ತಿರುವುದು ಏಕೆ’ ಎಂದು ಅಪ್ಪ ಕೇಳುತ್ತಾನೆ. ‘ತಾತನಿಗೆ ನೀನು ಮುರಿದ ಮಡಿಕೆಯಲ್ಲಿ ಊಟ ಕೊಡುತ್ತಿರುವಂತೆ, ಮುಂದೆ ನಾನು ನಿನಗೆ ಊಟ ಕೊಡಲು ಬೇಕಲ್ಲ’ ಎಂದು ಆ ಮಗು ಉತ್ತರಿಸುತ್ತದೆ. ಹಿರಿಯರನ್ನು ಅಲಕ್ಷಿಸುವ ಪ್ರತಿಯೊಬ್ಬರಿಗೂ ಆ ಮಗುವಿನ ಉತ್ತರದಲ್ಲಿ ಪಾಠವಿದೆ.

■ ಪ್ರವೀಣ ಕುಲಕರ್ಣಿ



ಈಶ್ವರ್